ಸಿಗುತ್ತೆ ವರ್ಷ ಪೂರ್ತಿ ನನಗೆ ಕೆಲಸ ಸಿಗುತ್ತೆ ಎಂ.ಎ.ಬಿ.ಎಡ್ ಓದಿ ಉದ್ಯೋಗ ಅರಸಿ ಪಟ್ಟಣಕ್ಕೆ ಹೋಗುವುದನ್ನು ತಪ್ಪಿದೆ. ಕುಟುಂಬದವರೊಂದಿಗೆ ಬದುಕುವ ಅವಕಾಶ ಸಿಕ್ಕಿದೆ, ನೆರಳು ಸಿಗುತ್ತೆ ಇದಕ್ಕು ಮಿಗಿಲಾಗಿ ಓದುಗರಿಗೆ ಕೇಳುಗರಿಗೆ ಪಾಠ ಹೇಳಿ ಕೊಡುವ ಅವಕಾಶ ದೊರಕಿಸಿ ಕೊಟ್ಟಿದೆ. ಇಂದು ಕೃಷಿ ಓದು ಬರಹ ಬಾರದೆ ಇರುವ ಜನತೆಗೆ ಇದೆ ಎಂಬ ಕಲ್ಪನೆ ಹೊಂದಿ ಓದಿ ಉದ್ಯೋಗ ಅರಸಿ ಪಟ್ಟಣಕ್ಕೆ ಹೋಗುವ ನನ್ನೂರಿನ ಯುವಕರಿಗೆ ಹಳ್ಳಿಯಲ್ಲೂ ಜೀವನ ಕಟ್ಟಿಕೊಳ್ಳುವ ಉತ್ಸಾಹ ತುಂಬುವಂತಾಗಿದೆ ನನ್ನ ಮಾದರಿ ತೋಟಗಾರಿಕೆ ಹಾಗೂ ಸಮಗ್ರ ಕೃಷಿ ಪದ್ಧತಿ.

ಒಂದು ಕಾಲದಲ್ಲಿ ಇವರ ತಂದೆ ಸಾರಿಗೆ ಕೆಲಸಮಾಡಿ ಕುಟುಂಬವನ್ನು ಸಾಕುತ್ತಿದ್ದರು ಕೇವಲ ಎರಡು ಎತ್ತಿಗೆ ಬೇಕಾದ ಹೊಟ್ಟು ಹಾಗೂ ಮೇವಿನ ಸಮಸ್ಯೆಯಿಂದ ಬಳಲುತ್ತಿದ್ದ ಇವರು ಇಂದು 2 ಎತ್ತುಗಳ ಜೊತೆಗೆ 3 ಜರ್ಸಿ ತಳಿ ಆಕಳುಗಳು ಹಾಗೂ ಎರಡು ಆಡುಗಳನ್ನು ಸಾಕಿ ಅದರಿಂದಲೂ ಆದಾಯ ಪಡೆಯಿತ್ತಿದ್ದಾರೆ. ಎರೆ ಹುಳು ಗೊಬ್ಬರ ಘಟಕಗಳನ್ನು ಸ್ಥಾಪಿಸಿಕೊಂಡು ಎರೆಹುಳು ಗೊಬ್ಬರವನ್ನು ಉತ್ಪಾದನೆ ಮಾಡುತ್ತಿದ್ದು, ಹೈನುಗಾರಿಕೆ ಹಾಗೂ ಎರೆಹಳು ಗೊಬ್ಬರದಿಂದ ವರ್ಷಕ್ಕೆ ಕ್ರಮವಾಗಿ 50 ಮತ್ತು 20 ಸಾವಿರ ರೂಪಾಯಿಗಳ ಆದಾಯವನ್ನು ಗಳಿಸುತ್ತಿದ್ದಾರೆ. ಆತ್ಮಾ ಯೋಜನೆಯ ಫಲಾನುಭವಿಯಾಗಿದ್ದು ಯುವ ಕೃಷಿಕರ ಸ್ವ-ಸಹಾಯ ಗುಂಪು ರಚಿಸಿಕೊಂಡು 10,000 ರೂಪಾಯಿ ಸುತ್ತು ನಿಧಿ ಪಡೆದುಕೊಂಡಿದ್ದಾರೆ. ಹಾಗೆಯೇ ತೊಗರೆ ಹಾಗೂ ನವಣೆಯ ಅಂತರಬೆಳೆ ತಾಂತ್ರಿಕತೆಯನ್ನು ಆತ್ಮ ಯೋಜನೆಯ ಪ್ರಾತ್ಯಕ್ಷತೆಯಡಿ ಅಳವಡಿಸಿಕೊಂಡಿದ್ದಾರೆ.

ಕಳೆದ ನಾಲ್ಕು ವರ್ಷಗಳಿಂದ ತೋಟಗಾರಿಕಾ ಬೆಳೆಗಳು ಫಲ ನೀಡುತ್ತಿದ್ದು. ಕಳೆದ ವರ್ಷ ಮಾವಿನ ಫಲದಿಂದ 14000/- ಹಣ ದೊರೆತಿದೆ. ಚಿಕ್ಕು ಗಿಡಗಳಿಂದ 9000/- ರೂಗಳು 15000/- ನೆಲ್ಲಿಯಿಂದ 4700/- ರೂಗಳು ದೊರೆತಿದ್ದು. ಕಳೆದ ವರ್ಷ ಹಣ್ಣಿನ ಗಿಡಗಳ ನಡುವೆ ಅಂತರಬೆಳೆಯಾಗಿ ಜೋಳ, ಹೆಸರು ಹಾಗೂ ತೂಗರಿ ಬೆಳೆಯನ್ನು ಬೆಳೆದಿದ್ದರಿಂದ ರೂ. 70 ಸಾವಿರ ಆದಾಯವನ್ನು ಗಳಿಸಿದ್ದಾರೆ, ಜೊತೆಗೆ ಕಳೆದ ವರ್ಷ 130 ನೀಲಗಿರಿ ಮರಗಳ ಮಾರಾಟದಿಂದ ರೂ 90 ಸಾವಿರ ಆದಾಯ ಬಂದಿದೆ. ಕೇವಲ ಹಣ ಒಂದನ್ನೆ ಲೆಕ್ಕಹಾಕದೆ ಆಕಳುಗಳಿಂದ ಬರುವ ಆದಾಯ ಬಹು ಮುಖ್ಯವಾದ ಸಂಗತಿಯಾಗಿದೆ. ಹಾಲು ಕೊಡುವ ರಾಸುಗಳಿಗೆ ನೀರಿಲ್ಲದೆ ಹಸಿರು ಮೇವು ದೊರೆಯುತ್ತಿದೆ. ಬರುವ ದಿನದಲ್ಲಿ 40 ಹುಣಸೆ ಗಿಡಗಳು ಫಲಕೊಡುವುದರಿಂದ ನನ್ನ ಉತ್ಪಾದನೆ ಇಮ್ಮಡಿಗೊಳ್ಳುತ್ತ ಹೋಗುತ್ತದೆ. ನನ್ನ ಹೋಲಕ್ಕೆ 1-00 ರೂಪಾಯಿಯನ್ನು ಖರ್ಚು ಮಾಡಿಲ್ಲ ಬಂದೆದ್ದೆಲ್ಲಾ ಆದಾಯವೆ ಆಗಿದೆ ಎನ್ನುವುದು ಗುಡದಪ್ಪನವರ ಅಭಿಪ್ರಾಯವಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಿರಿ.**


**ಗೌರಿಶಂಕರ ಸಜ್ಜನರ**
ತಾಲೂಕು ತಾಂತ್ರಿಕ ವ್ಯವಸ್ಥಾಪಕರು
ಆತ್ಮ ಯೋಜನೆ, ಮುಂಡರಗಿ ತಾಲೂಕು

**ಸುಶ್ಮಿತಾ ಹೆಬಸೂರ**
ಸಹಾಯಕ ತಾಂತ್ರಿಕ ವ್ಯವಸ್ಥಾಪಕರು
ಆತ್ಮ ಯೋಜನೆ, ಮುಂಡರಗಿ ತಾಲೂಕು

**ಎಸ್. ಬಿ. ನೆಗಳೂರ**
ಸಹಾಯಕ ಕೃಷಿ ನಿರ್ದೇಶಕರು
ಮುಂಡರಗಿ

**ಸಹದೇವ ಯರಗೊಪ್ಪ**
ಉಪ ಕೃಷಿ ನಿರ್ದೇಶಕರು-1,
ಗದಗ

**ಸಿ. ಬಿ. ಬಾಲರಡ್ಡಿ**
ಜಂಟಿ ಕೃಷಿ ನಿರ್ದೇಶಕರು,
ಗದಗ



ಕೃಷಿ ಇಲಾಖೆ ಗದಗ
ಜಿಲ್ಲಾ ಪಂಚಾಯತ ಗದಗ


"ಮಳೆ ಆಶ್ರಯದಲ್ಲಿ ಸಮಗ್ರ ಕೃಷಿ ಪದ್ಧತಿ"

# ಯಶೋಗಾಥೆ







# "ಮಳೆ ಆಶ್ರಯದಲ್ಲಿ ಸಮಗ್ರ ಕೃಷಿ ಪದ್ಧತಿ"

ಗದಗ ಜಿಲ್ಲೆಯ ತಾಲೂಕು ಮುಂಡರಗಿಯಿಂದ ಪಶ್ಚಿಮಕ್ಕೆ ಹೊರಟು ಐದು ಕಿ.ಮೀ. ಕ್ರಮಿಸಿದರೆ ಸಿಗುವುದೆ ಬೂದಿಹಾಳ ಗ್ರಾಮ. ಕೃಷಿಯನ್ನೆ ಮುಖ್ಯವಾದ ಕಸುಬನ್ನಾಗಿಸಿಕೊಂಡು ಜೀವಿಸುವ ಕುಟುಂಬಗಳೆ ಹೆಚ್ಚಿರುವ ಈ ಗ್ರಾಮದಲ್ಲಿ ಶ್ರೀ ಗುಡದಪ್ಪ ಮೈಲಾರಪ್ಪ ಲಿಂಗಶೆಟ್ಟರದು ಒಂದು ವಿಶಿಷ್ಠ ಕುಟುಂಬವಾಗಿದೆ ಹಾಗಾದರೆ ಈ ಕುಟುಂಬದ ವಿಶೇಷತೆ ಏನೆಂದು ತಿಳಿದು ಕೊಳ್ಳುವುದೆ ಈ ಯೋಶಗಾಥೆಯ ಮುಖ್ಯ ಉದ್ದೇಶವಾಗಿದೆ.

ಸಾಮಾನ್ಯವಾಗಿ ಕೃಷಿ ಅಂದ ತಕ್ಷಣವೆ ನಮ್ಮ ಮುಂದೆ ಮೂಡುವ ಪ್ರಶ್ನೆಗಳೆಂದರೆ ಮಣ್ಣು ಯಾವ ಬಗೆಯದ್ದು.? ಎಷ್ಟು ಇಂಚು ನೀರು.? ಇದೆ ಯಾವ ಯಾವ ಬೆಳೆ ಬೆಳೆಯಲು ಯೋಗ್ಯವಾಗಿದೆ.? ಎಂಬುವುದು ಮುಖ್ಯ. ಎಲ್ಲಾ ಅನುಕೂಲವಿರುವಲ್ಲಿ ಯಶಸ್ಸು ಸಾಧಿಸುವುದು ಸುಲಭದ ಕೆಲಸ. ಆದರೆ ಯಾವ ಬೆಳೆ ಬೆಳೆಯಲು ಯೋಗ್ಯವಲ್ಲದ ಗರಸು ಮಣ್ಣು ಯಾವುದೆ ನೀರಿನ ಸೌಕರ್ಯ ಹೊಂದದೆ, ತೋಟಗಾರಿಕೆ, ಅರಣ್ಯ, ಕೃಷಿ ಮಾಡುತ್ತಿರುವುದೆ ಇಲ್ಲಿಯ ವಿಶೇಷತೆಯಾಗಿದೆ.

ಕೃಷಿ ಎಂದರೆ ಮೂಗು ಮುರಿಯುವ ಇಂದಿನ ಯುವ ಪೀಳಿಗೆ ಕೃಷಿಯೊಂದನ್ನು ಹೊರತುಪಡಿಸಿ ಬೇರೆ ಯಾವ ಕೆಲಸ ಮಾಡಲು ತಯಾರಿದ್ದಾರೆ. ಹಿಂದಿನ ಕಾಲದಲ್ಲಿ ಓದಲು ಬಾರದ ಜನರು ಕೃಷಿಯೊಂದನ್ನು ಉದ್ಯೋಗವನ್ನಾಗಿ ಮಾಡಿಕೊಂಡಿದ್ದರು. ಇಂದು ಓದಿ ನಿರುದ್ಯೋಗಿಗಳೆನಿಸಿಕೊಳ್ಳುತ್ತಿದ್ದಾರೆ. ಹೀಗೇಕೆ ಎಂದು ವಿಚಾರಿಸಿದಾಗ ಅವರಿಂದ ಬರುವ ಉತ್ತರ ಕೃಷಿ ತಿಂಗಳ ಪಗಾರವಲ್ಲ ಎನ್ನುತ್ತಾರೆ. ಇದಕ್ಕೆ ವ್ಯತಿರಿಕ್ತ ಎಂಬಂತೆ ಕೃಷಿ ಮಾಡುತ್ತಿದ್ದಾರೆ. ಗುಡದಪ್ಪನವರ ಮಾತಿನಲ್ಲಿ ಕೃಷಿ ಎಂದರೆ ಜೀವನ. ಕೃಷಿ ಅಳಿದರೆ ಮಾನವನ ಕುಲದನಾಶ ಎನ್ನುತ್ತಾರೆ. ಮುಂದುವರೆದು ಅವರೆ ಹೇಳುವಂತೆ ನೌಕರಿ 60 ವರ್ಷಕ್ಕೆ ಮುಗಿದರೆ ಕೃಷಿಗೆ ಅಂತ್ಯವೆಂಬುದಿಲ್ಲ. ಇದಕ್ಕೆ ನಿದರ್ಶನ ಕೊಡುತ್ತಾರೆ. ಮಳೆಗಾಲದಲ್ಲಿ ಕಾಳು ಬಿತ್ತಿ ಬೆಳೆ ತೆಗೆದರೆ, ಒಮ್ಮೆ ಹಣ್ಣಿನ ಸಸಿಗಳನ್ನು ಹಾಕಿದರೆ ಮಕ್ಕಳಿಗೂ ಮೊಮ್ಮಕ್ಕಳಿಗೂ ಉದ್ಯೋಗ ಒದಗಿಸಿಕೊಟ್ಟಂತೆ. ಉದ್ಯೋಗಸ್ಥರು ಮಕ್ಕಳಿಗೆ ಎಲ್.ಐ.ಸಿ ಮಾಡಿಸಿ ಹಣ ತುಂಬಬೇಕಾಗುತ್ತದೆ. ಕೃಷಿಕ ಅರಣ್ಯ ಸಸಿಗಳನ್ನು ನೆಟ್ಟರೆ ಹಣ ತುಂಬುವ ಅವಶ್ಯಕತೆ ಬೀಳುವುದಿಲ್ಲ ಅದೇ ಸಸಿಗಳು ಮುಂದೊಂದು ದಿನ ದೊಡ್ಡ ಮಟ್ಟದ ಹಣ ಒದಗಿಸುತ್ತವೆ. ಕೃಷಿಯಲ್ಲಿ ಎಲ್ಲವನ್ನು ಹಣದಿಂದ ಅಳೆಯಲು ಸಾಧ್ಯವಿಲ್ಲ. ಅರಣ್ಯ ಗಿಡಗಳು ಹಣ್ಣಿನ ಗಿಡಗಳು ಅಳತೆಗೆ ಸಿಗದಷ್ಟು ಆಮ್ಲಜನಕ, ಪಕ್ಷಿ ಸಂಕುಲಕ್ಕೆ ಆಹಾರ ನೆರಳು ಉರುವಲು ಮುಂತಾದ ರೀತಿಯಲ್ಲಿ ಸಹಾಯಕಾರಿಯಾಗಿವೆ. ಕೃಷಿಯಲ್ಲಿ ಉಪ ಕಸುಬು ಅಥವಾ ಮುಖ್ಯ ಕಸುಬಾಗಿ ಪಶು ಮೇಕೆ





ಸಾಕಾಣಿಕೆಯನ್ನು ಮಾಡುವುದರಿಂದ ಹೆಚ್ಚಿನ ಆದಾಯವನ್ನು ಖಂಡಿತ ಗಳಿಸಬಹುದು. ಮುಖ್ಯವಾಗಿ ಬೇಕಾದ ಆಹಾರವನ್ನು ಮೊದಲು ನಮ್ಮ ಹೊಲದಲ್ಲಿ ಸಿದ್ಧಪಡಿಸಿಕೊಳ್ಳಬೇಕು. ನನ್ನ ತೋಟದಲ್ಲಿ ನೋಡುವುದಾದರೆ 70 ಬೇವಿನ, ಗೊಬ್ಬರದ ಗಿಡ/ಸುಬಾಬುಲ್ ಗಿಡಗಳನ್ನು ಬೆಳೆಸಿದ್ದೇನೆ ಇವುಗಳ ಗೊಬ್ಬರವು ನಮಗೆ ಆದಾಯ ತಂದುಕೊಡುತ್ತದೆ ಹಾಗೆಯೇ ಪೀಡೆನಾಶಕ ಬಳಕೆಯಲ್ಲೂ ನಮಗೆ ಸಹಾಯಕಾರಿಯಾಗಿವೆ

ಗುಡದಪ್ಪನವರಿಗೆ ಪಿತ್ರಾರ್ಜಿತವಾಗಿ ಬಂದ ಒಟ್ಟು 13 ಎಕರೆ ಭೂಮಿಯಲ್ಲಿ ಶೇಂಗಾ, ತೊಗರಿ ಸೇರಿದಂತೆ ಹಲವು ಧಾನ್ಯಗಳನ್ನು ಮಳೆಯಾಶ್ರಯದಲ್ಲಿ ಬೆಳೆಯುತಿದ್ದು. ಭೈಪ್ ಸಂಸ್ಥೆಯಿಂದ ಅರಣ್ಯ–ತೋಟಗಾರಿಕೆ ಕುರಿತು ತರಬೇತಿ ಹಾಗೂ ಕ್ಷೇತ್ರ ಸಹಾಯಕ (ಫೀಲ್ಡ ಗೈಡ) ಆಗಿ ಸೇರಿಕೊಂಡ, ಅನೇಕ ಯಶಸ್ವಿ ರೈತರ ಜಮೀನುಗಳಿಗೆ ಭೇಟಿ ನೀಡಿದ ನಂತರ ಪಾಳು ಬಿದ್ದಿದ್ದ 3.15 ಎಕರೆ ಒಣ ಭೂಮಿಯಲ್ಲಿ ತೋಟಗಾರಿಕಾ ಬೆಳೆಗಳಾದ 40 ಮಾವು, 110 ನೀರಲ, 25 ಚಿಕ್ಕು, 2 ಟೆಂಗಿನ ಮರ, 5 ಸೀತಾಫಲ, 5 ನೆಲ್ಲಿಗಿಡ, 5 ಪೇರಲ 25 ಚಿಕ್ಕು ಹಾಗೂ 25 ಹುಣಸೆಯನ್ನು ಹಾಗೂ 70 ಅಕೇಶಿಯ, ಗಾಳಿ ಗಿಡ, ಸೀಮೆ ತಂಗಡಿ, ತೇಗ, ಸುಬಾಬುಲ್, ನೀಲಗಿರಿ ಹಾಗೂ ಬೇವು ನಂತಹ ಅರಣ್ಯ ಸಸಿಗಳನ್ನು ಬೆಳೆಸಿದ್ದಾರೆ. ಇದರೊಂದಿಗೆ ಸಜ್ಜೆ, ನವಣೆ, ತೊಗರಿ, ಹುರುಳಿ, ಜೋಳ ಹಾಗೂ ಹೆಸರು ಬೆಳೆಗಳನ್ನು ಬೆಳೆಯುತ್ತಿದ್ದಾರೆ.

ಇದೆಲ್ಲವನ್ನು ಓದಿದ ಮೇಲೆ ನಿಮಗೆ ಒಂದು ಪ್ರಶ್ನೆ ಮೂಡಬಹುದಲ್ಲವೆ? ಸರಿ ಮಳೆಗಾಲದಲ್ಲಿ ಹಣ್ಣಿನ ಗಿಡಗಳಿಗೆ ದೇವರೆ ನೀರು ಹಾಯಿಸಬಲ್ಲ ಬೇಸಿಗೆ ಕಾಲದಲ್ಲಿ ನೀರು ಯಾರು ಉಣಿಸುತ್ತಾರೆ, ಎಲ್ಲಿಂದ ತರುತ್ತಾರೆ ಹೇಗೆ ವ್ಯವಸ್ಥೆ ಮಾಡಿಕೊಂಡಿದ್ದೀರಿ ಎಂಬ ಹಲವು ಬಗೆಯದಾಗಿರಬಹುದು ಇದಕ್ಕೆ ಒಂದೇ ಉತ್ತರ ನಮ್ಮ ಮನಸ್ಸು (ಆತ್ಮ ಸ್ಥೈರ್ಯ) ಹೊಲದ ಮಧ್ಯದಲ್ಲಿ ಒಂದು ಕೃಷಿ ಹೊಂಡದ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಇದಕ್ಕೂ ಮೊದಲು ಇಳಿಜಾರಿಗೆ ಅಡ್ಡಲಾಗಿ ಬದುಗಳನ್ನು ನಿರ್ಮಿಸಲಾಗಿದೆ, ಕಂದಕ(ಟ್ರಂಚು)ಗಳನ್ನು ಮುಚ್ಚದೆ ಹಾಗೇಯೆ ತೆರೆದಿಡಲಾಗಿದೆ. ಗಲ್ಲಿ ಪ್ಲಗ್ಗ (ಕಲ್ಲಿನ ಅಡೆ ತಡೆ) ನಿರ್ಮಿಸಲಾಗಿದೆ. ಮಳೆಗಾಲದಲ್ಲಿ ತುಂಬಿದ ಕೃಷಿ ಹೊಂಡದ ನೀರನ್ನು ಬೇಸಿಗೆಯಲ್ಲಿ ಉಪಯೋಗಿಸಲಾಗುತ್ತದೆ. ಕೃಷಿ ಹೊಂಡ ನಿರ್ಮಿಸುವ ಮೊದಲು ಸೈಕಲ್ ಮೂಲಕ ಬಹು ದೂರದಿಂದ ನೀರನ್ನು ತಂದು ಗಿಡಗಳಿಗೆ ಉಣಿಸಲಾಗಿತ್ತು. ಮಣ್ಣಿನ ಮಡಿಕೆಯಿಂದ ಹನಿ ನೀರಾವರಿ ಪದ್ಧತಿಯನ್ನು ಸಹಾ ಅಳವಡಿಸಿಕೊಂಡಿದ್ದಾರೆ.

ಇದಲ್ಲದೆ ಸ್ಟೈಲೋ ಹೇಮೆಟಾ ಎಂಬ ಹುಲ್ಲನ್ನು ಬೆಳೆಯಲಾಗುತ್ತದೆ. ದನಗಳಿಗೆ ಒಳ್ಳೆಯ ಮೇವು ಆಗುತ್ತದೆ. ಇದರ ಜೊತೆಗೆ ಸುಬಾಬುಲ್ಲನ್ನು ಮೇವಿನ ಬೆಳೆಯಾಗಿ ಬೆಳೆಯುತಿದ್ದಾರೆ. ಸರಿ ಬೆಳೆದಿದ್ದಾಯಿತು ಮಾಡಿದ್ದಾಯಿತು ಇದರಿಂದ ಹೇಗೆ ಅನುಕೂಲವಾಗಿದೆ ಎಂದು ಕೇಳಿದರೆ ಗುಡದಪ್ಪನವರ ಉತ್ತರ ಹೀಗಿದೆ. ಹೊಲದಿಂದ ಹಣ್ಣು ಸಿಗುತ್ತೆ, ಹುಲ್ಲು ಸಿಗುತ್ತೆ, ಧಾನ್ಯ ಸಿಗುತ್ತೆ, ಕಟ್ಟಿಗೆ